| | | | |
|---|---|---|---|
| 7. | ಕಟ್ಟಡಗಳು | 64 | |
| | ಖಾಸಗಿ ಆಸ್ತಿಗಳ ಒಟ್ಟು ಹಾನಿ | - | ರೂ. 89.96 ಲಕ್ಷಗಳು |
| | ಸಾರ್ವಜನಿಕ ಆಸ್ತಿಗಳ ಒಟ್ಟು ಹಾನಿ | - | ರೂ. 667.29 ಲಕ್ಷಗಳು |
| | | ಒಟ್ಟು | ರೂ. 757.25 ಲಕ್ಷಗಳು |

ಆ) ಮಳೆಹಾನಿ ಪರಿಹಾರಾಕ್ಕಾಗಿ ಕೊಡಗು ಜಿಲ್ಲೆಗೆ ಈ ಸಾಲಿನಲ್ಲಿ ರೂ.200.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಇಲ್ಲ.

ವಿಷಯ: ಕೊಡಗು ಜಿಲ್ಲೆಯಲ್ಲಿ ಏಲಕ್ಕಿ ಬೆಳೆ ಕುರಿತು.

2648 (3305)

ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಏಲಕ್ಕಿ ಬೆಳೆಯುತ್ತಿದ್ದ ಪ್ರದೇಶಗಳು ಕಳೆದ 10 ವರ್ಷಗಳಿಂದ ಏಲಕ್ಕಿ ಬೆಳೆಗೆ ತಗುಲಿರುವ ಮಾರಕ ರೋಗದಿಂದ ನಾಶಗೊಂಡಿದ್ದು ಏಲಕ್ಕಿ ಬೆಳೆಗಾರರು ದುಸ್ಥಿತಿಯಲ್ಲಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಏಲಕ್ಕಿ ಬೆಳೆಯಲಾದ ಹಾಗೂ ಬಹುತೇಕ ಅನ್‌ರೆಡಿಮ್ಡ್ ಜಾಗವನ್ನೇ ಹೊಂದಿರುವ ರೈತರು ಕಾಫಿ ಬೆಳೆಯನ್ನೇ ಅವಲಂಬಿಸಬೇಕಾಗಿರುವುದನ್ನು ಸರ್ಕಾರವು ಗಮನಿಸಿದೆಯೇ?

ಇ) ಈ ಪ್ರದೇಶದಲ್ಲಿ ಕಾಫಿ ಬೆಳೆ ವ್ಯವಸಾಯ ಮಾಡಲು ದಟ್ಟವಾದ ಮರಗಳ ನೆರಳು ಅಡಿಯಾಗಿದ್ದು, ಕಾಫಿ ವ್ಯವಸಾಯಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಕನಿಷ್ಠ 4 ಅಡಿ ಗಾತ್ರದ ಮರಗಳನ್ನು ಕಡಿಯಲು ಸರ್ಕಾರ ಅನ್‌ರೆಡಿಮ್ಡ್ ಜಾಗದಲ್ಲಿ ಅನುಮತಿ ನೀಡುವುದೆ?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) ಏಲಕ್ಕಿ ಬೆಳೆಗೆ ಕಟ್ಟೆ ರೋಗವು ಹಲವಾರು ವರ್ಷಗಳಿಂದ ಮಲೆನಾಡು ಪ್ರದೇಶದಲ್ಲಿ ಬಾಧಿಸುತ್ತಿರುವ ವಿಷಯ ತಿಳಿದಿರುತ್ತದೆ. ಈ ಬೆಳೆಯ ಅಭಿವೃದ್ಧಿಯನ್ನು ಸಾಂಬಾರು ಮಂಡಳಿಯು ವಹಿಸಿಕೊಂಡಿದ್ದು, ಇಲಾಖೆಯಲ್ಲಿ ಯಾವುದೇ ಅಭಿವೃದ್ಧಿ

ಯೋಜನೆಗಳನ್ನು ಹಮ್ಮಿಕೊಂಡಿರುವುದಿಲ್ಲ. ಆದಾಗ್ಯೂ ರೈತರ ಬೇಡಿಕೆ ಬಂದಾಗ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ತಾಂತ್ರಿಕ ಸಲಹೆ, ಹಾಗೂ ಶೇಕಡ 50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿ ಒದಗಿಸಲಾಗುತ್ತದೆ. ಈ ಬಗ್ಗೆ ಹೆಚ್ಚಿನ ವಿಷಯ ಸಾಂಬಾರು ಮಂಡಳಿಯಿಂದ ಪಡೆಯಬಹುದಾಗಿರುತ್ತದೆ.

ಆ) ಈ ವಿಷಯವು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಇ) ಈ ವಿಷಯವು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುತ್ತದೆ.

ವಿಷಯ: ಆಶ್ರಯ ಯೋಜನೆಯಡಿಯಲ್ಲಿ ಸ್ವಂತ ಮನೆ ನಿರ್ಮಾಣ.

2649 (3628)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಿವೇಶನ ನೀಡಿ ಆಶ್ರಯ ಯೋಜನೆಯಡಿಯಲ್ಲಿ ಸ್ವಂತ ಮನೆ ಕಟ್ಟುವ ಕೆಲಸ ಎಷ್ಟು ಕ್ಷೇತ್ರಗಳಲ್ಲಿ ಪ್ರಾರಂಭವಾಗಿದೆ?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ:ಹೆಚ್ಯುಡಿ 1 ಹೆಚ್ಎಹೆಚ್ 95 (2) ದಿನಾಂಕ 18-8-95ರ ಪ್ರಕಾರ ಫಲಾನುಭವಿಗಳೇ ಮನೆಗಳನ್ನು ಸ್ವಂತ ನಿರ್ಮಿಸಬೇಕಾಗುತ್ತದೆ.

ಈ ನೀತಿಯ ಪ್ರಕಾರ ಎಲ್ಲಾ ಜಿಲ್ಲೆಗಳಲ್ಲಿ 95-96, 96-97 ಮತ್ತು 97-98ನೇ ಸಾಲಿನಲ್ಲಿ ಫಲಾನುಭವಿಗಳೇ ಸ್ವಂತ ಮನೆ ಕಟ್ಟುವ ಕೆಲಸ ಎಲ್ಲಾ ಕಡೆ ನಡೆಯುತ್ತಿದೆ. (ಫಲಾನುಭವಿಗಳು ಮನೆ ಕಟ್ಟದೆ ಕಂಟ್ರಾಕ್ಟರುಗಳು ಮನೆ ಕಟ್ಟುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ)

ವಿಷಯ: ನರಸಿಂಹರಾಜ ಕ್ಷೇತ್ರ ವ್ಯಾಪ್ತಿ ನಗರಪಾಲಿಕೆಯ ಆಶ್ರಯ ಯೋಜನೆ ಮನೆಗಳ ವಿತರಣೆಯಲ್ಲಿ ಅವ್ಯವಹಾರ

2650 (3204)

ಶ್ರೀ ಇ.ಮಾರುತಿ ರಾವ್ ಪವಾರ್ (ನರಸಿಂಹರಾಜ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರ ನರಸಿಂಹರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ನಗರಪಾಲಿಕೆ ಆಶ್ರಯ